

## ಆಧುನಿಕ ಜೀವನ ಶೈಲಿ

'ಸುಧಾ' ಜೂನ್ 6ರ ಮುಖಪುಟ ಲೇಖನ 'ಸಖೀಗೀತದ ಸುಖ ದುಃಖ' (ಹೇಮಾ ವೆಂಕಟ್) ಆಧುನಿಕ ಜೀವನ ಶೈಲಿಯಲ್ಲಿ ಆಗಿರುವ ಬದಲಾವಣೆಯನ್ನು ಬಿಂಬಿಸಿದೆ.

-ವಿಭಾ ಮುರಳೀಧರ್, ತುಮಕೂರು/ ಸು.ವಿಜಯಲಕ್ಷ್ಮಿ, ವೈ.ಜಿ.ನರಸಿಂಹನ್, ಶಿವಮೊಗ್ಗ/ ಎಸ್.ಜಿ.ಕುಮುದ, ಬೆಂಗಳೂರು

## ಸಕಾಲಿಕ ವಿಶ್ಲೇಷಣೆ

'ಮಾಂಸಾಹಾರ'ದ ಕುರಿತ ಶಿಕಾಕು ವಿಚಾರ ಲಹರಿ ಸಕಾಲಿಕ ವಿಶ್ಲೇಷಣೆ ಒಳಗೊಂಡಿದೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಎಚ್.ಆನಂದಕುಮಾರ್, ಚಿತ್ರದುರ್ಗ

## ಶಿಕಾಕು ದ್ವಂದ್ವ

ಕಾಡುಪ್ರಾಣಿಗಳನ್ನು ಬೇಟೆಯಾಡುವುದು ತಪ್ಪು, ಆದರೆ ತಾನು ಸಾಕಿದ ಪ್ರಾಣಿಗಳನ್ನು ಕೊಂದು ತಿನ್ನುವುದು ಸರಿ! ಎನ್ನುವ ಶಿಕಾಕು ವಿಚಾರ ಲಹರಿ ದ್ವಂದ್ವ ಹಾಗೂ ವಿರೋಧಾಭಾಸಗಳಿಂದ ಕೂಡಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ಸುಂದರ ಚಿತ್ರಗಳು

'ಕೃಷ್ಣಮೃಗಗಳ ರಾಷ್ಟ್ರೀಯ ಉದ್ಯಾನ ವೇಲಾವದರ್' ಬಗ್ಗೆ ಜಿ.ಎಸ್. ಕೃಷ್ಣಮೂರ್ತಿ ಬರಹ ಮಾಹಿತಿಪೂರ್ಣವಾಗಿತ್ತು. ಚಿತ್ರಗಳು ಅಂದವಾಗಿದ್ದವು.

-ತರಂಗಿಣಿ, ತುಮಕೂರು/ ನೆ.ಲ.ರಾಂ, ಬೆಂಗಳೂರು

## ಕೀಟ ಇನ್ನು ಅನಿವಾರ್ಯ!

ಊಟದ ಪ್ಲೇಟಿನಲ್ಲಿ ಕೀಟ! (ಬರಹ: ಸುಧಾ ಹೆಗಡೆ) ಬಹುಶಃ ಮುಂದಿನ ದಿನಗಳಲ್ಲಿ ಈ ಕೀಟಗಳು 'ಸೈಡ್ ಡಿಶ್' ತರ, ಇಲ್ಲವೆ ಹಪ್ಪಳ ಸಂಡಿಗೆ, ಚಕ್ಕುಲಿ ತರ ಊಟದ 'ಮೆನು'ವಿನಲ್ಲಿ ಕಾಣಿಸಿಕೊಳ್ಳಬಹುದೇನೋ!?

-ವಿಜಯಕುಮಾರ್ ಜೈನ್, ಹರಪನಹಳ್ಳಿ

## ಚಿಂತನಾರ್ಹ ಲೇಖನ

ಸುಮಂಗಲಾ ಮುಮ್ಮಿಗಟ್ಟಿಯವರ 'ಯೋಚಿಸು, ಸೇವಿಸು, ಉಳಿಸು' ಇಂದಿನ ದಿನಗಳಲ್ಲಿ ಬಹುವಾಗಿ ಚಿಂತನೆ ಮಾಡಬೇಕಾದ ವಿವರಗಳನ್ನು ಒಳಗೊಂಡಿದೆ.

ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

## ಮಾರ್ಮಿಕ ಕಥೆ

ತಮಗೆ ಇಷ್ಟವಾದ ವಸ್ತು ಬೇರೆಯವರ ಪಾಲಾದಾಗ ಅದರ ಬಗ್ಗೆ ಹೇಗೆ ಜುಗುಪ್ಸೆ ಮೂಡುತ್ತದೆ ಎಂದು ಟಿ.ಎನ್. ಷಣ್ಮುಖರ ಕಥೆ 'ತಮಟೆ ಸದ್ದು' ಮಾರ್ಮಿಕವಾಗಿ ಶ್ರುತಪಡಿಸುತ್ತದೆ. ಶಾಸ್ತ್ರಿ ಆಸೆಪಟ್ಟವಳನ್ನೇ ಮಗ ಮದುವೆಯಾಗುವುದು ಕಥೆಗೆ ಒಳ್ಳೆಯ ನಾಟಕೀಯ ತಿರುವು ನೀಡಿದೆ.

-ನೇ.ಗೋ.ಭ., ಕುಕ್ಕೆಸುಬ್ರಹ್ಮಣ್ಯ/ ಪತ್ರೇಶಿ ಹಿರೇಮಠ, ಹಗರಿ ಬೊಮ್ಮನಹಳ್ಳಿ

## ಉತ್ತರ ಯಾರ ಪರವಾಗಿ?

'ನೀವು ಕೇಳಿದಿರಿ?' ಅಂಕಣದಲ್ಲಿ 'ಹುಡುಗಿಯರು ಬೇಗನೆ ಮನಸೋಲುವುದು ಹುಡುಗರ ಯಾವ ಗುಣಕ್ಕೆ? ಎಂಬ ಪ್ರಶ್ನೆಗೆ, 'ಕೋತಿಯಂತೆ ಹಲ್ಕಿರಿದು, ನಾಯಿಯಂತೆ ಹಿಂಬಾಲಿಸಿ...' ಎಂಬ ರಾಮ್ ಉತ್ತರ– ನಿರಭಿಮಾನಿ ಪುರುಷರಿಗೆ ಎಚ್ಚರಿಕೆಯೋ ಅಥವಾ ಸ್ತ್ರೀ ವರ್ಗದ ಓಲೈಕೆಯೋ ನನಗೆ ಜಿಜ್ಞಾಸೆಯಾಗಿ ಕಾಡುತ್ತಿದೆ.

-ಪಿ.ಎಂ.ಸುರೇಶ್, ಸುಳ್ಯ

## ನನ್ನದೇ ತಪ್ಪು

ಮೇ 9ರ 'ಸುಧಾ' ಸಂಚಿಕೆಯಲ್ಲಿ ಪ್ರಕಟವಾದ 'ದ ಡೇ ಆಫ್ ಪೈ' ಲೇಖನಕ್ಕೆ ಪ್ರೊ.ಎಂ.ಎ.ಹಿಪ್ಪರಗಿ ಅವರು ಮೇ 30ರ ಸಂಚಿಕೆಯಲ್ಲಿ 'ವ್ಯಾಸ' ಎಂದು ತಿದ್ದುಪಡಿ ಸೂಚಿಸಿರುವುದು ಸರಿಯಾಗಿದೆ. 'ತ್ರಿಜ್ಯ' ಮತ್ತು ವ್ಯಾಸಗಳ ನಡುವಿನ ಅರ್ಥದ ಗೊಂದಲದಿಂದಾಗಿ ನಾನು ಜೂನ್ 6ರ ಸಂಚಿಕೆಯಲ್ಲಿ 'ವ್ಯಾಸ' ಅಲ್ಲ, 'ತ್ರಿಜ್ಯ' ಎಂದು ತಿಳಿಸಿದ್ದೆ. ಯಾವುದೇ ವೃತ್ತದ 'ವ್ಯಾಸ'ದಿಂದ ಅದರ 'ಪರಿಧಿ'ಯನ್ನು ಭಾಗಿಸಿದರೆ 'ಪೈ' ನ ಬೆಲೆ 3.142857 ಬರುತ್ತದೆ. ಆಲ್ಬರ್ಟ್ ಐನ್‌ಸ್ಟೈನ್‌ರ ಜನ್ಮದಿನ ಮಾರ್ಚ್ 14. ಆದ್ದರಿಂದ ಆ ದಿನವನ್ನು 'ದ ಡೇ ಆಫ್ ಪೈ' ಎಂದು ಕರೆಯಲಾಗಿದೆ.

-ಗುಬ್ಬಿ ರೇವಣಾರಾಧ್ಯ, ಬೆಂಗಳೂರು

